# ಕರ್ನಾಟಕ ಲೋಕಾಯುಕ್ತ

**ಸಂ.ಕಂಪ್ಲೆಂಟ್/ಉಪಲೋಕ್/ಬಿಸಿಡಿ/1807/2021**
**ಪಿಓ/ಎ.ಆರ್.ಇ–2 (ಮಂಡನಾಧಿಕಾರಿಗಳ ಶಾಖೆ)**

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ:16/04/2022.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** ಸರ್ಕಾರಿ ನೌಕರರಾದ **ಶ್ರೀ. ಹೆಚ್. ಪ್ರಕಾಶ್ ಬಿನ್ ಲೇಟ್ ಹಾಲಪ್ಪ, ಪ್ರಥಮ ದರ್ಜೆ ಸಹಾಯಕರು, ಪಿ.ವಿ.ಪಿ. ಪಾಲಿಟೆಕ್ನಿಕ್, ನಾಗರಬಾವಿ ರಿಂಗ್ ರೋಡ್, ಅಂಬೇಡ್ಕರ್ ಇಂಜಿನೀರಿಂಗ್ ಕಾಲೇಜು ಆವರಣ, (ಪ್ರಿಮೈಸಸ್), ಮಲ್ಲತ್ತಹಳ್ಳಿ, ಬೆಂಗಳೂರು–56,** ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

1. ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಕೇಂದ್ರ ವಲಯ, ಬೆಂಗಳೂರು, ಇವರು ಪೋಲಿಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ನಗರ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **ಶ್ರೀ. ಹೆಚ್. ಪ್ರಕಾಶ್ ಬಿನ್ ಲೇಟ್ ಹಾಲಪ್ಪ, ಪ್ರಥಮ ದರ್ಜೆ ಸಹಾಯಕರು, ಪಿ.ವಿ.ಪಿ. ಪಾಲಿಟೆಕ್ನಿಕ್, ನಾಗರಬಾವಿ ರಿಂಗ್ ರೋಡ್, ಅಂಬೇಡ್ಕರ್ ಇಂಜಿನೀರಿಂಗ್ ಕಾಲೇಜು ಆವರಣ, ಮಲ್ಲತ್ತಹಳ್ಳಿ, ಬೆಂಗಳೂರು–56,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಇವರು **ಶ್ರೀ. ಎಮ್. ಎನ್. ಶ್ರೀನಿವಾಸ್, ಬಿನ್ ಲೇಟ್ ನಂಜಪ್ಪ, ನಂ.19, 7ನೇ ಮುಖ್ಯ ರಸ್ತೆ, ನಂಜಪ್ಪ ಗಾರ್ಡನ್, ಕೊನೆ ಮಲ್ಲತ್ತಹಳ್ಳಿ, ಗವಿರಂಗನಾಥ ಸ್ವಾಮಿ ನಿಲಯ, ಅಚ್ಯುತ್ ಅಪಾರ್ಟ್‌ಮೆಂಟ್ ಹಿಂಭಾಗ, ಬೆಂಗಳೂರು–56,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ), ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7 (2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಿರುತ್ತಾರೆ. ಬೆಂಗಳೂರು ನಗರ ಎ.ಸಿ.ಬಿ ಪೋಲೀಸ್ ಠಾಣೆ ಮೊಕದ್ದಮೆ **ಸಂ:11/2018** ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

   i. ದೂರುದಾರರು ಪಿ.ವಿ.ಪಿ. ಪಾಲಿಟೆಕ್ನಿಕ್‌ನ ವಿಜ್ಞಾನ ವಿಭಾಗದಲ್ಲಿ ಸಹಾಯಕನಾಗಿ 1999 ರಿಂದ ಕೆಲಸ ನಿರ್ವಹಿಸುತ್ತಿದ್ದು, ದಿನಾಂಕ: 11/05/2004ರಲ್ಲಿ ದೂರುದಾರರ ಸಹಾಯಕರ ಹುದ್ದೆಗೆ ಸರ್ಕಾರದಿಂದ ಕಾಲೇಜು ಅನುದಾನಗೊಳಪಟ್ಟು ಅಂದಿನಿಂದ ಅನುದಾನಿತ ಸಿಬ್ಬಂದಿಯಾಗಿ ಕರ್ತವ್ಯ ನಿರ್ವಹಿಸಿಕೊಂಡು ಬಂದಿರುತ್ತಾರೆ. ದೂರುದಾರರಿಗೆ ವಯಸ್ಸಾದ ತಂದೆ ಮತ್ತು ತಾಯಿ ಇದ್ದು, ಅವರು ಅನಾರೋಗ್ಯದಿಂದ ಬಳಲುತ್ತಿರುವಾಗ, ಅವರ ಆರೋಗ್ಯ ತಪಾಸಣೆಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅವರುಗಳನ್ನು ಆಸ್ಪತ್ರೆಯಲ್ಲಿ ಒಂದು ತಿಂಗಳು ದಾಖಲು ಮಾಡಿದ್ದು, ಆಗ

ದೂರುದಾರರು ಸದರಿ ಕಾಲೇಜಿನ ಪ್ರಾಂಶುಪಾಲರುಗಳಿಗೆ ಮನವಿ ಮಾಡಿ ರಜೆ ಕೇಳಿಕೊಂಡು ಹೋಗಿರುತ್ತಾರೆ. ತದನಂತರ ದೂರುದಾರರು ಆಸ್ಪತ್ರೆಯಲ್ಲಿ ಹೆಚ್ಚು ಕಾಲ ಉಳಿಯುವ ಸಂದರ್ಭದಲ್ಲಿ ರಜೆ/ವೇತನ ರಹಿತ ರಜೆ ಕೇಳಿದರೂ ಕೊಟ್ಟಿರುವುದಿಲ್ಲ ಹಾಗೂ ದೂರುದಾರರ ತಂದೆ ಮತ್ತು ತಾಯಿಯವರು ಉಳಿದಿರುವುದಿಲ್ಲ ಮತ್ತು ಇದರಿಂದ ಮನ ನೊಂದ ದೂರುದಾರರು ಅನಾರೋಗ್ಯದಿಂದ ಬಳಲುತ್ತಿದ್ದು, ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ನಂತರ ಆರೋಗ್ಯ ಸುಧಾರಿಸಿದ ಮೇಲೆ ದೂರುದಾರರು ಕರ್ತವ್ಯಕ್ಕೆ ತೆಗೆದುಕೊಳ್ಳುವಂತೆ ಅವರ ಮೇಲಾಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದರೂ ಸಹ ಸೇವೆಗೆ ಸೇರಿಸಿಕೊಳ್ಳದೆ ವಿನಾಕಾರಣ ದೂರುದಾರರಿಗೆ ಮೆಮೊ ನೀಡಿರುತ್ತಾರೆ. ನಂತರ ಆರ್.ಟಿ.ಐ.ನಲ್ಲಿ ದೂರುದಾರರು ಮನವಿಗಳ ಬಗ್ಗೆ ಕೋರಿದರೂ ಸಹ ಉತ್ತರವನ್ನು ನೀಡಿರುವುದಿಲ್ಲ. ಕೆಲವು ದಿನಗಳ ನಂತರ, ಎದುರುದಾರರು ಸದರಿ ಕಾಲೇಜಿನಲ್ಲಿ ಪ್ರಥಮ ದರ್ಜೆ ಸಹಾಯಕನಾಗಿ ಕೆಲಸ ನಿರ್ವಹಿಸುತ್ತಿದ್ದು, ದೂರುದಾರರ ಬಳಿ ಬಂದು ಆರ್.ಟಿ.ಐ.ನಲ್ಲಿ ಕೇಳಿರುವ ದಾಖಲಾತಿಗಳನ್ನು ತಂದುಕೊಡಲು 25,000/- ರೂ.ಗಳನ್ನು ಕೊಡಬೇಕೆಂದು ಕೇಳಿ ಪಡೆದುಕೊಂಡಿರುತ್ತಾರೆ. ನಂತರ ದಿನಾಂಕ: 06/04/2018ರಂದು ಬೆಳಿಗ್ಗೆ ಸುಮಾರು 11-00 ರಿಂದ 12-00 ಗಂಟೆ ಸಮಯದಲ್ಲಿ ಎದುರುದಾರರು ಅವರ ಮೊಬೈಲ್ ನಂ.9008457805ನಿಂದ ದೂರುದಾರರ ಮೊಬೈಲ್ ನಂ.9880130253ಗೆ ಮಿಸ್ ಕಾಲ್ ಮಾಡಿದ್ದು, ನಂತರ ದೂರುದಾರರು ಎದುರುದಾರರ ಮೊಬೈಲ್‌ಗೆ ಕರೆ ಮಾಡಿದಾಗ, ಎದುರುದಾರರು ದೂರುದಾರರಿಗೆ ಕೆಲಸಕ್ಕೆ ಸೇರಿಸಿಕೊಳ್ಳುವ ಸಂಬಂಧ ಮಾತನಾಡಬೇಕಿದ್ದು, ಮಲ್ಲತ್ತಹಳ್ಳಿಯಲ್ಲಿರುವ ಆಲದ ಮರದ ಸರ್ಕಲ್ ಬಳಿ ಬರುವಂತೆ ತಿಳಿಸಿದ್ದು, ಅದರಂತೆ ದೂರುದಾರರು ಎದುರುದಾರರನ್ನು ಭೇಟಿ ಮಾಡಿದಾಗ, ಎದುರುದಾರರು ದೂರುದಾರರಿಗೆ ರೂ.3-ಲಕ್ಷಗಳನ್ನು ನೀಡಿದಲ್ಲಿ ಡಿ.ಟಿ.ಇ ಮತ್ತು ಪಿ.ಎ. ಮತ್ತು ಕಚೇರಿಯ ಸಂಬಂದಪಟ್ಟ ಅಧಿಕಾರಿಗಳ ಬಳಿ ಈಗಾಗಲೇ ಮಾತನಾಡಿದ್ದು, ಕೆಲಸಕ್ಕೆ ಪುನ: ನೇಮಕ ಮಾಡಿಕೊಳ್ಳುವ ಸಂಬಂದ ಸಹಾಯ ಮಾಡುತ್ತೇನೆಂದು ಹೇಳಿ ಅಂತಿಮವಾಗಿ ರೂ.2,75,000/-ಗಳನ್ನು ಮೂರು ದಿನಗಳೊಳಗಾಗಿ ಕೊಡಲೇಬೇಕೆಂದು ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ದೂರುದಾರರಿಗೆ ಲಂಚವನ್ನು ಕೊಡಲು ಇಷ್ಟವಿಲ್ಲದೇ ಇರುವುದರಿಂದ, ದಿನಾಂಕ:06/04/2018 ರಂದು ಎದುರುದಾರರು ದೂರುದಾರರಿಗೆ ಲಂಚದ ಹಣ ಬೇಡಿಕೆ ಇಟ್ಟ ಸಂಭಾಷಣೆಯನ್ನು ದೂರುದಾರರು ಅವರ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡು ಅದನ್ನು ಸಿಡಿಗೆ ವರ್ಗಾಯಿಸಿಕೊಂಡಿರುತ್ತಾರೆ.

ii. ದಿನಾಂಕ: 10/04/2018 ರಂದು 16-00 ಗಂಟೆಗೆ ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದ ಕಾರಣ ತನಿಖಾಧಿಕಾರಿಗಳನ್ನು ಭೇಟಿಮಾಡಿ ದೂರು ನೀಡಿದ್ದು, ಅದರ ಆಧಾರದ ಮೇಲೆ ಬೆಂಗಳೂರು ನಗರದ ಎಸಿಬಿ ಪೋಲಿಸ್ ಠಾಣೆ ಮೊ. ಸಂ. 11/2018 ರಲ್ಲಿ ಕಲಂ 7, 8 ಭ್ರಷ್ಟಾಚಾರ ನಿಗ್ರಹ ಕಾಯ್ದೆ (ತಿದ್ದುಪಡಿ) 1988ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

iii. ಪ್ರಕರಣ ದಾಖಲಾದ ನಂತರ, ದಿನಾಂಕ: 10/04/2018 ರಂದು ತನಿಖಾಧಿಕಾರಿಗಳು ಪಂಚ ಸಾಕ್ಷಿಗಳ ಕರೆಯಲು ಹಿರಿಯ ಅಧಿಕಾರಿಗಳಿಗೆ ಪತ್ರ ಬರೆದು ದಿನಾಂಕ: 11/04/2018ರಂದು ಪಂಚರು ತಮ್ಮ ಮುಂದೆ ಹಾಜರಾಗುವಂತೆ ತಿಳಿಸಿದ ಮೇರೆಗೆ ದಿನಾಂಕ:11/04/2018ರಂದು ಬೆಳಿಗ್ಗೆ 9.15 ಗಂಟೆಗೆ ಸರ್ಕಾರಿ ಪಂಚರುಗಳಾದ 1) ಶ್ರೀ. ವಿಜಯ್ ಎಸ್.ಸಿ. (ನೆರಳು ಸಾಕ್ಷಿ) 2) ಶ್ರೀ. ಲೋಕೇಶ್ ನಾಯ್ಕ್ ಎಸ್. ಹೆಚ್. ಇವರುಗಳು ತನಿಖಾಧಿಕಾರಿಗಳ ಮುಂದೆ ಹಾಜರಾಗಿದ್ದು, ತನಿಖಾಧಿಕಾರಿಗಳು ಅವರುಗಳ ಪರಿಚಯವನ್ನು ಮಾಡಿಕೊಂಡು ಹಾಗೂ ದೂರುದಾರರಿಗೆ ಪರಿಚಯ ಮಾಡಿಸಿ, ದೂರುದಾರರ ದೂರಿನ ಮೇರೆಗೆ ಕೇಸ್ ದಾಖಲು ಮಾಡಿರುವ ವಿಚಾರ ತಿಳಿಸಿ ದೂರಿನ ಪ್ರತಿಯನ್ನು ಪಂಚರುಗಳಿಗೆ ಕೊಟ್ಟು, ಅದರಲ್ಲಿನ ಸಾರಾಂಶವನ್ನು ತಿಳಿದುಕೊಳ್ಳಲು ಹೇಳಿರುತ್ತಾರೆ. ದೂರುದಾರರು ದೂರಿನಲ್ಲಿ ಮಾಡಿರುವ ಆರೋಪಗಳ ಬಗ್ಗೆ ಪಂಚರು ಮತ್ತೊಮ್ಮೆ ದೂರುದಾರರಿಂದ ಕೇಳಿ ಖಾತ್ರಿ ಮಾಡಿಕೊಂಡಿರುತ್ತಾರೆ. ದೂರುದಾರರು ಪಂಚರ ಸಮಕ್ಷಮ ತಮ್ಮ ಮೊಬೈಲ್ ಹಾಗೂ ಸಂಭಾಷಣೆಯನ್ನು ರೆಕಾರ್ಡ್ ಮಾಡಿದ್ದ ಸಿಡಿಯನ್ನು ಹಾಜರುಪಡಿಸಿದ್ದು, ಹಾಜರುಪಡಿಸಿದ ಸಿಡಿಯನ್ನು ಕಂಪ್ಯೂಟರ್‌ಗೆ ಹಾಕಿ ಪ್ಲೇ ಮಾಡಿ ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವುದು ಧೃಢಪಟ್ಟಿರುತ್ತದೆ. ನಂತರ ಲಂಚ ನೀಡಲು ತಂದ (ರೂ.2,000/– ಮುಖಬೆಲೆಯ 137–ನೋಟುಗಳು ಮತ್ತು ರೂ.500/– ಮುಖಬೆಲೆಯ 2–ನೋಟುಗಳು) ಒಟ್ಟು 2,75,000/- ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ನಂ.ಗಳನ್ನು ಮತ್ತು ಮೌಲ್ಯವನ್ನು ಪಂಚರು ಪರಿಶೀಲಿಸಿದ್ದು, ಅವುಗಳ ನಂ. ಮತ್ತು ಮೌಲ್ಯವನ್ನು ಪ್ರತ್ಯೇಕ ಹಾಳೆಯಲ್ಲಿ ಕಂಪ್ಯೂಟರ್‌ನಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ. ಪೋಲೀಸ್ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಫ್ತಲೀನ್ ಪೌಡರನ್ನು ಸವರಿದ್ದು, ಸದರಿ ಹಣವನ್ನು ಪಂಚ ಸಾಕ್ಷಿ–2 ಲೋಕೇಶ್ ನಾಯ್ಕ್ ರವರಿಗೆ ನೀಡಿದ್ದು, ಅವರು ಸದರಿ ನೋಟುಗಳನ್ನು ತನ್ನ ಎರಡೂ ಕೈಗಳಲ್ಲಿ ಎಣಿಸಿ ನಂ. ಮತ್ತು ಮೌಲ್ಯ ನಮೂದು ಮಾಡಿಕೊಂಡಿರುವುದಕ್ಕೆ ತಾಳೆಯಾಗಿರುವ ಬಗ್ಗೆ ಖಚಿತಪಡಿಸಿರುತ್ತಾರೆ. ನಂತರ ತನಿಖಾಧಿಕಾರಿಗಳ ಸೂಚನೆಯಂತೆ ಪಂಚ–1–ವಿಜಯ್‌ರವರು ದೂರುದಾರರ ಅಂಗ ಶೋಧನೆ ಮಾಡಿದ್ದು, ಫಿನಾಫ್ತಲೀನ್ ಪೌಡರನ್ನು ಸವರಿದ ರೂ.2,75,000/–ಗಳನ್ನು ಪಂಚ ಸಾಕ್ಷಿ–2 ಲೋಕೇಶ್ ನಾಯ್ಕ್ ರವರಿಂದ ಎದುರುದಾರರು ಧರಿಸಿದ್ದ ಪ್ಯಾಂಟಿನ ಬಲಭಾಗದ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಸಿಬ್ಬಂದಿಯಿಂದ ಎರಡು ಪ್ರತ್ಯೇಕವಾದ ಬಟ್ಟಲುಗಳಲ್ಲಿ ಸೋಡಿಯಮ್ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ ಪಂಚ ಸಾಕ್ಷಿ–2 ಲೋಕೇಶ್ ನಾಯ್ಕ್‌ರವರ ಎರಡೂ ಕೈ ಬೆರಳುಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಲಾಗಿ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಫ್ತಲೀನ್ ಪೌಡರನ ವೈಶಿಷ್ಟತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಗೆ ಎದುರುದಾರರನ್ನು ಭೇಟಿಯಾಗುವ ಕುರಿತಂತೆ ವಿಚಾರಿಸಿದಾಗ, ದೂರುದಾರರು ಹೆಚ್ಚಾಗಿ ನನ್ನ ಸ್ವಂತ ಕಾರಿನಲ್ಲಿ ಓಡಾಡುವುದರಿಂದ ಎದುರುದಾರರನ್ನು ಭೇಟಿಯಾದಾಗ ಎದುರುದಾರರು

ದೂರುದಾರರ ಕಾರಿನಲ್ಲೆ ಕುಳಿತುಕೊಂಡು ಮಾತನಾಡುತ್ತಿದ್ದುದಾಗಿ ತಿಳಿಸಿದರು. ಆಗ ತನಿಖಾಧಿಕಾರಿಯವರು ಪಂಚ-1ರವರಿಗೆ ಡ್ರೈವಿಂಗ್ ಬರುವ ಬಗ್ಗೆ ವಿಚಾರಿಸಿದ್ದು, ದೂರುದಾರರಿಗೆ ಪಂಚ-1ರವರಿಗೆ ಕಾರು ಚಾಲನೆ ಮಾಡಲು ನೀಡುವಂತೆ ತಿಳಿಸಿ, ನಂತರ ದೂರುದಾರರಿಗೆ ಎದುರುದಾರರನ್ನು ಭೇಟಿ ಮಾಡಿದಾಗ ಅವರನ್ನು ಕಾರಿನೊಳಗೆ ಕರೆದುಕೊಂಡು ಮಾತನಾಡಿ ಆ ಸಮಯದಲ್ಲಿ ಎದುರುದಾರರು ಲಂಚದ ಹಣಕ್ಕೆ ಒತ್ತಾಯ ಮಾಡಿದಾಗ, ಫಿನಾಫ್ತಲೀನ್ ಲೇಪಿತ ಹಣವನ್ನು ಮಾತ್ರ ಕೊಡಬೇಕೆಂದೂ, ಹಾಗೇ ಕೊಟ್ಟಾಗ ಅವರು ಅದನ್ನು ಯಾವ ರೀತಿಯಲ್ಲಿ ಪಡೆದುಕೊಳ್ಳುತ್ತಾರೆ, ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಅವರಿಗೆ ಅನುಮಾನ ಬಾರದ ರೀತಿಯಲ್ಲಿ ಗಮನಿಸಿಕೊಂಡು, ನಂತರ ಕಾರಿನ ಪಾರ್ಕಿಂಗ್ ಲೈಟನ್ನು ಆನ್ ಮಾಡುವ ಮೂಲಕ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಗೆ ಆ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ಒಂದು ವಾಯ್ಸ್ ರೆಕಾರ್ಡ್‌ನ್ನು ನೀಡಿ ಅದನ್ನು ಉಪಯೋಗಿಸುವ ರೀತಿ ತಿಳಿಸಿ ಹಾಗೂ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು, ನೆರಳು ಸಾಕ್ಷಿಯಾದ ಪಂಚ-1 ವಿಜಯ್‌ರವರಿಗೆ ದೂರುದಾರರು ಎದುರುದಾರರೊಂದಿಗೆ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಾಮಾನಗಳನ್ನು ಗಮನಿಸಬೇಕೆಂದು ಸೂಚನೆ ನೀಡಿರುತ್ತಾರೆ. ಪಂಚರು, ದೂರುದಾರರು ಹಾಗೂ ಸಿಬ್ಬಂದಿಯವರು ತಮ್ಮ ತಮ್ಮ ಕೈಗಳನ್ನು ಶುದ್ಧವಾಗಿ ಸೋಪಿನಿಂದ ನೀರಿನಲ್ಲಿ ತೊಳೆದುಕೊಂಡಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ಹಂತ ಹಂತವಾಗಿ ಛಾಯಾಚಿತ್ರ ತೆಗೆಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿನಾಂಕ: 11/04/2018ರಂದು ಬೆಳಿಗ್ಗೆ 09-30 ಗಂಟೆಯಿಂದ 11-30 ಗಂಟೆಯವರೆಗೆ ಬೆಂಗಳೂರು ನಗರದ ಎಸಿಬಿ ಕಚೇರಿಯಲ್ಲಿ ತನಿಖಾಧಿಕಾರಿಗಳು ಪ್ರಾಯೋಗಿಕ ಪಂಚನಾಮೆಯನ್ನು ತಮ್ಮ ಸಿಬ್ಬಂದಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಿರುತ್ತಾರೆ.

iv. ಅದೇ ದಿನ ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ನಗರ ಪೋಲೀಸ್ ಠಾಣೆಯಲ್ಲಿ ತನಿಖಾಧಿಕಾರಿಯವರು ವಹಿಸುವಿಕೆ ಪಂಚನಾಮೆಯನ್ನು ಮುಗಿಸಿ, ಮಧ್ಯಾಹ್ನ 12-00 ಗಂಟೆಗೆ, ಎದುರುದಾರರು ಕರ್ತವ್ಯ ನಿರ್ವಹಿಸುತ್ತಿದ್ದ ಪಿವಿಪಿ ಪಾಲಿಟೆಕ್ನಿಕ್ ಕಾಲೇಜು, ಮಲ್ಲತ್ತಹಳ್ಳಿ, ಬೆಂಗಳೂರು, ಕಚೇರಿಗೆ ಹೊರಟು, ಮಧ್ಯಾಹ್ನ 1-10 ಗಂಟೆಗೆ ಪಾಪರೆಡ್ಡಿ ಪಾಳ್ಯದ ಮುಖ್ಯರಸ್ತೆಯಲ್ಲಿರುವ ಆಲದ ಮರದ ಬಸ್ ನಿಲ್ದಾಣದ ಬಳಿ ಬಂದಿದ್ದು, ದೂರುದಾರರು ಎದುರುದಾರರಿಗೆ ಮೊಬೈಲ್‌ನಿಂದ ಕರೆ ಮಾಡಿದಾಗ, ಎದುರುದಾರರು ಬರುವುದಾಗಿ ತಿಳಿಸಿದರು, ಆ ಸಮಯದಲ್ಲಿ ಪಂಚ-1 ವಿಜಯ್‌ರವರು ಕಾರಿನ ಹಿಂಬದಿ ಸೀಟಿನಲ್ಲಿ ಕುಳಿತಿರುತ್ತಾರೆ. ಸುಮಾರು 1-45 ಗಂಟೆಗೆ ಎದುರುದಾರರು ಕಾರಿನ ಬಳಿ ಬಂದು ದೂರುದಾರರನ್ನು ನೋಡಿ ಮಾತನಾಡಿಸಿ, ಅವರ ಕಾರಿನ ಮುಂಭಾಗದ ಎಡಭಾಗದ ಸೀಟಿನಲ್ಲಿ ಕುಳಿತುಕೊಂಡು ಮಾತನಾಡಿ, ಸುಮಾರು 2-3 ನಿಮಿಷಗಳ ನಂತರ ಎದುರುದಾರರು ಲಂಚದ ಹಣದ ವಿಷಯ ಮಾತನಾಡುತ್ತಾ ಸಾಯಂಕಾಲ ನೀಡಬಹುದಾಗಿತ್ತು ಎಂದಾಗ, ದೂರುದಾರರು ಎಲೆಕ್ಷನ್, ಹಣ

ತರುವುದು ಕಷ್ಟವಾಗಿರುತ್ತದೆ ಅದಕ್ಕೆ ಈಗಲೇ ಬಂದಿರುವುದಾಗಿ ತಿಳಿಸಿದ್ದು, ಅದರಂತೆ ದೂರುದಾರರು ಫಿನಾಫ್ತಲೀನ್ ಲೇಪಿತ ಲಂಚದ ಹಣವನ್ನು ಎದುರುದಾರರಿಗೆ ನೀಡಿ ಎಣಿಸಿಕೊಳ್ಳಿ ಎಂದಾಗ, ಎದುರುದಾರರು ಆ ಹಣವನ್ನು ತನ್ನ ತೊಡೆಯ ಮೇಲೆ ಇರಿಸಿ ತನ್ನ ಎರಡು ಕೈಗಳಿಂದ ಎಣಿಸಿಕೊಂಡು ತನ್ನ ಪ್ಯಾಂಟಿನ ಎಡಜೇಬಿನಲ್ಲಿ ಇಟ್ಟುಕೊಂಡು, ಜೇಬಿನಲ್ಲಿದ್ದ ಒಂದು ಸಣ್ಣ ಪೇಪರ್‌ನಲ್ಲಿ ನೋಟುಗಳ ಮುಖಬೆಲೆಯನ್ನು ಬರೆದುಕೊಂಡಿದ್ದಾಗಿರುತ್ತದೆ. ಆಗ ದೂರುದಾರರು ತಮ್ಮ ಕಾರಿನ ಪಾರ್ಕಿಂಗ್ ಲೈಟನ್ನು ಆನ್ ಮಾಡುವ ಮೂಲಕ ಸೂಚನೆ ನೀಡಿರುತ್ತಾರೆ.

v. ದೂರುದಾರರು ಪೂರ್ವ ನಿಗದಿತ ಸೂಚನೆ ನೀಡಿದ ನಂತರ ತನಿಖಾಧಿಕಾರಿಗಳು ಪಂಚರೊಂದಿಗೆ ಎದುರುದಾರರು ಇದ್ದ ಸ್ಥಳ ಅಂದರೆ ದೂರುದಾರರು ಮತ್ತು ಎದುರುದಾರರು ಕುಳಿತಿದ್ದ ಕಾರಿನ ಹತ್ತಿರ ಬಂದು, ತಮ್ಮ ಗುರುತಿನ ಚೀಟಿ ಎದುರುದಾರರಿಗೆ ತೋರಿಸಿ, ತಮ್ಮ ಪರಿಚಯ ಹೇಳಿ ಮತ್ತು ಅವರ ಪರಿಚಯ ಕೇಳಿ, ಅವರ ಮೇಲೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ದೂರು ದಾಖಲಾಗಿರುವ ವಿಚಾರ ತಿಳಿಸಿ, ತನಿಖೆಗೆ ಸಹಕರಿಸುವಂತೆ ತಿಳಿಸಿದ್ದು ಇರುತ್ತದೆ. ದೂರುದಾರರು ಹಾಗೂ ಪಂಚ ಸಾಕ್ಷಿ-1ರವರು ತನಿಖಾಧಿಕಾರಿಗಳಿಗೆ ನಡೆದ ವಿದ್ಯಾಮಾನವನ್ನು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರನ್ನು ಕಾರಿನಿಂದ ಕೆಳಕ್ಕೆ ಇಳಿಸಿ ತಮ್ಮ ಟಾಟಾ ಸುಮೊ ಸರ್ಕಾರಿ ವಾಹನದಲ್ಲಿ ಮುಂದಿನ ಔಚಿತ್ಯ ಕ್ರಮವನ್ನು ಜರುಗಿಸಿರುತ್ತಾರೆ. ತನಿಖಾಧಿಕಾರಿಗಳು ಸಿಬ್ಬಂದಿಯಿಂದ ಎರಡು ಪ್ರತ್ಯೇಕವಾದ ಬಟ್ಟಲುಗಳಲ್ಲಿ ಸೋಡಿಯಮ್ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ, ಎದುರುದಾರರ ಎರಡೂ ಕೈ ಬೆರಳುಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಲಾಗಿ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಗಳು ದೂರುದಾರರಿಂದ ಪಡೆದ ಲಂಚದ ಹಣವನ್ನು ಹಾಜರುಪಡಿಸಲು ತಿಳಿಸಿದಾಗ, ಎದುರುದಾರರು ಧರಿಸಿದ್ದ ಪ್ಯಾಂಟಿನ ಎಡಭಾಗದ ಜೇಬಿನಲ್ಲಿ ಇಟ್ಟಿರುವುದಾಗಿ ತಿಳಿಸಿದಾಗ, ತನಿಖಾಧಿಕಾರಿಗಳ ಸೂಚನೆಯಂತೆ ಪಂಚ-2 ಲೋಕೇಶ್ ನಾಯ್ಕರವರು ಎದುರುದಾರರ ಜೇಬಿನಿಂದ ಹಣವನ್ನು ಹೊರತೆಗೆದಿದ್ದು, ಅವುಗಳನ್ನು ಪರಿಶೀಲಿಸಲಾಗಿ, ಸದರಿ ನೋಟುಗಳು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನಮೂದಿಸಿದ ನೋಟುಗಳ ನಂಬರುಗಳಿಗೆ ಹಾಗೂ ಮೌಲ್ಯಕ್ಕೆ ಹೋಲಿಕೆಯಾಗಿರುತ್ತವೆ. ನಂತರ ತನಿಖಾಧಿಕಾರಿಗಳು ಸದರಿ ಲಂಚದ ಹಣದ ಬಗ್ಗೆ ಎದುರುದಾರರಲ್ಲಿ ವಿಚಾರಿಸಿದಾಗ, ಎದುರುದಾರರು ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ. ತನಿಖಾಧಿಕಾರಿಗಳು ಸದರಿ ಹಣವನ್ನು ಜಪ್ತ ಮಾಡಿಕೊಂಡು ಒಂದು ಕವರ್‌ನಲ್ಲಿ ಹಾಕಿ ಸೀಲ್ ಮಾಡಿರುತ್ತಾರೆ ಹಾಗೂ ಎದುರುದಾರರು ನೋಟುಗಳ ಮುಖಬೆಲೆಯನ್ನು ಬರೆದುಕೊಂಡು ಇಟ್ಟುಕೊಂಡಂತಹ ಚೀಟಿಯನ್ನು ಸಹಾ ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ಬದಲಿ ಪ್ಯಾಂಟಿನ ವ್ಯವಸ್ಥೆ ಮಾಡಿ, ಅವರು ಧರಿಸಿದ್ದ ಪ್ಯಾಂಟ್‌ನ ಎಡಭಾಗದ ಜೇಬಿನ ಒಳಭಾಗವನ್ನು ಸಿಬ್ಬಂದಿಯಿಂದ ತಯಾರಿಸಿದ್ದ ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ಗುಲಾಬಿ ಬಣ್ಣಕ್ಕೆ

ತಿರುಗಿರುತ್ತದೆ. ನಂತರ ತನಿಖಾಧಿಕಾರಿಗಳು ಲಂಚದ ಹಣವಿಟ್ಟ ಪ್ಯಾಂಟನ್ನು ತಮ್ಮ ವಶಕ್ಕೆ ಪಡೆದಿರುತ್ತಾರೆ. ಲಂಚದ ಹಣ ಸ್ವೀಕರಿಸಿದ ಸ್ಥಳವು ಸಾರ್ವಜನಿಕ ಸ್ಥಳವಾಗಿದ್ದರಿಂದ, ಮುಂದಿನ ಟ್ರಾಪ್ ಪ್ರಕ್ರಿಯೆಯನ್ನು ನಡೆಸಲು ತನಿಖಾಧಿಕಾರಿಗಳು ಟ್ರಾಪ್ ತಂಡವನ್ನು ಎದುರುದಾರರ ಪಿವಿಪಿ ಪಾಲಿಟೆಕ್ನಿಕ್ ಕಾಲೇಜಿಗೆ ಕರೆದುಕೊಂಡು ಹೋಗಿ ಅಲ್ಲಿನ ಪ್ರಾಂಶುಪಾಲರಾದ ಮಂಜುನಾಥರವರಿಗೆ ಘಟನೆಯ ಬಗ್ಗೆ ತಿಳಿಸಿ, ದೂರುದಾರರಿಗೆ ಸಂಬಂದಿಸಿದ ಕಡತವನ್ನು ಹಾಜರು ಪಡಿಸಲು ತಿಳಿಸಿದಾಗ, ಪ್ರಾಂಶುಪಾಲರು, ದಾಖಲಾತಿಗಳನ್ನು ನೀಡಿದ್ದು, ಅವುಗಳ ನಕಲು ಮಾಡಿಸಿ, ಪ್ರಾಂಶುಪಾಲರವರಿಂದ ಧೃಡೀಕರಿಸಿಕೊಂಡು ತಮ್ಮ ವಶಕ್ಕೆ ಪಡೆದಿರುತ್ತಾರೆ.

vi. ನಂತರ ತನಿಖಾಧಿಕಾರಿಗಳು ಎದುರುದಾರರ ಹಾಗೂ ದೂರುದಾರರ ಮಾದರಿ ಧ್ವನಿಯನ್ನು ಪಡೆಯುವ ಅವಶ್ಯಕತೆ ಇದ್ದು, ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ಹಾಜರುಪಡಿಸಿದ್ದ ಸಿಡಿಯಲ್ಲಿದ್ದ ದೂರುದಾರ ಮತ್ತು ಎದುರುದಾರರ ನಡುವೆ ನಡೆದಿದ್ದ ಸಂಭಾಷಣೆಯನ್ನು ವಾಯ್ಸ್ ರೆಕಾರ್ಡ್ ಮೂಲಕ ಸಂಗ್ರಹಿಸಿ ಲಿಪಿಕರಣ ಮಾಡಿ ಅದನ್ನು ದೂರುದಾರರಿಂದ ಮತ್ತು ಎದುರುದಾರರಿಂದ ಮೂರು ಮೂರು ಬಾರಿ ಓದಿಸಿ, ವಾಯ್ಸ್ ರೆಕಾರ್ಡ್‌ನಲ್ಲಿ ಮುದ್ರಣ ಮಾಡಿರುತ್ತಾರೆ. ನಂತರ ಲ್ಯಾಪ್ ಟಾಪ್‌ನ ಮೂಲಕ ಸಿಡಿಗಳಿಗೆ ವರ್ಗಾಯಿಸಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ವಾಯ್ಸ್ ರೆಕಾರ್ಡ್‌ನಲ್ಲಿ ಮುದ್ರಣ ಮಾಡಿಕೊಂಡಿದ್ದನ್ನು ಹಾಜರುಪಡಿಸಲು ಸೂಚಿಸಿದ್ದು, ಅದರಂತೆ ದೂರುದಾರರು ವಾಯ್ಸ್ ರೆಕಾರ್ಡ್‌ನ್ನು ಹಾಜರುಪಡಿಸಿದಾಗ, ಅದನ್ನು ಕಂಪ್ಯೂಟರ್ ನಲ್ಲಿ ಅಳವಡಿಸಿ ಸಂಭಾಷಣೆಯನ್ನು ಕೇಳಿಸಿದ್ದು, ಅದರಲ್ಲಿ ಲಂಚದ ಹಣ ಕುರಿತ ಸಂಭಾಷಣೆ ನಡೆಸಿರುವುದು ಕಂಡು ಬಂದಿದ್ದು, ಅದನ್ನು ಲಿಪಿಕರಣ ಮಾಡಿ ಹಾಗೂ ವಾಯ್ಸ್ ರೆಕಾರ್ಡ್‌ನಿಂದ ಲ್ಯಾಪ್ ಟಾಪ್ ಮೂಲಕ ಸಿಡಿಗೆ ವರ್ಗಾಯಿಸಿರುತ್ತಾರೆ.

vii. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, ಎದುರುದಾರರು ತಮ್ಮ ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ "ದೂರುದಾರರು ದೀರ್ಘಕಾಲ ಅನಧಿಕೃತವಾಗಿ ಗೈರುಹಾಜರಾಗುತ್ತಿದ್ದು, ದಿನಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿ 07-ದಿನಗಳೊಳಗಾಗಿ ಖುದ್ದಾಗಿ ಹಾಜರಾಗಬೇಕೆಂದು ತಿಳಿಸಲಾಗಿತ್ತು. ಈ ಸಂಬಂಧವಾಗಿ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ಕಚೇರಿಗೆ ಪತ್ರ ಬರೆಯಲಾಗಿತ್ತು. ನಿರ್ದೇಶಕರ ಕಚೇರಿ ಆಪ್ತ ಶಾಖೆ ವಿಭಾಗ, ಶ್ರೀ ಮಂಜುನಾಥರವರ ಜೊತೆಗೆ ಮಾತನಾಡಿ, ನಮ್ಮ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ದೂರುದಾರರು ಅನಧಿಕೃತವಾಗಿ ಗೈರುಹಾಜರಾಗುತ್ತಿದ್ದು, ನಿಮ್ಮ ಇಲಾಖೆಗೆ ಪತ್ರ ಬರೆದಿರುತ್ತೇವೆ. ನಿಮ್ಮ ಇಲಾಖೆಯಿಂದ ಪತ್ರವನ್ನು ಬರೆಯುವಂತೆ ಮನವಿ ಮಾಡಿಕೊಂಡಿದೆ. ಅದಕ್ಕೆ 3-ಲಕ್ಷ ಹಣವಾಗುತ್ತದೆ ಎಂದು ತಿಳಿಸಿದ್ದು, ಆಮೇಲೆ 2,50,000/- ಆಗುತ್ತದೆ ಎಂದು ತಿಳಿಸಿರುತ್ತಾರೆ. ಅದಕ್ಕೆ ಸರಿ ಎಮ್.ಎನ್. ಶ್ರೀನಿವಾಸ ಇವರ ಹತ್ತಿರ ಮಾತನಾಡುತ್ತೇನೆ ಎಂದು ತಿಳಿಸಿದೆ. ಮತ್ತೆ ಮಂಜುನಾಥ ಸಾರ್ ಹತ್ತಿರ ಮಾತನಾಡಿದೆ ಇದಕ್ಕೆ ಅವರು

ಸರಿ ಎಂದು ತಿಳಿಸಿದರು. ನಾನು ಎಮ್.ಎನ್. ಶ್ರೀನಿವಾಸ ಇವರಿಂದ ಒಟ್ಟು 2,75,000/- ರೂ.ಗಳನ್ನು ಪಡೆದುಕೊಂಡಿರುವುದು ಸರಿ ಎಂದು ಹೇಳಬಯಸುತ್ತೇನೆ," ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ. ಎದುರುದಾರರು ನೀಡಿದ ಸಮಜಾಯಿಷಿಯ ಬಗ್ಗೆ ತನಿಖಾಧಿಕಾರಿಗಳು ದೂರುದಾರರನ್ನು ವಿಚಾರಿಸಿದಾಗ, ದೂರುದಾರರು ಎದುರುದಾರರು ಬರೆದುಕೊಟ್ಟಿರುವ ವರದಿಯಲ್ಲಿ ತಿಳಿಸಿರುವಂತೆ ತಾನು ಯಾರಿಗೆ ಹಣವನ್ನು ನೀಡುತ್ತೇನೆಂದು, ಯಾರ ಪರವಾಗಿ ಹಣವನ್ನು ಪಡೆಯುತ್ತೇನೆಂದು ತಿಳಿಸಿರಲಿಲ್ಲ, ಆದರೆ ಈಗ ಅವರ ವರದಿಯಲ್ಲಿ ನಿರ್ದೇಶಕರ ಕಚೇರಿಯ ಆಪ್ತ ಶಾಖೆ ಇಲಾಖೆಯ ಮಂಜುನಾಥರವರಿಗೆ ಹಣವನ್ನು ನೀಡುವುದಾಗಿ ತಿಳಿಸಿದ್ದು, ಈ ವರದಿಯು ಸುಳ್ಳೆಂದು ತಿಳಿಸಿರುತ್ತಾರೆ. ನಂತರ ಟ್ರಾಪ್ ಕಾಲಕ್ಕೆ ದೂರುದಾರರು ಎದುರುದಾರರನ್ನು ಭೇಟಿ ಮಾಡಿದ ಸಮಯದಲ್ಲಿ ನಡೆದ ವಿದ್ಯಾಮಾನಗಳನ್ನು ದೂರುದಾರರು ವಾಯ್ಸ್ ರೆಕಾರ್ಡನಲ್ಲಿ ಮುದ್ರಣ ಮಾಡಿಕೊಂಡಿದ್ದನ್ನು ಪರಿಶೀಲಿಸಿರುತ್ತಾರೆ ಹಾಗೂ ವಾಯ್ಸ್ ರೆಕಾರ್ಡನಿಂದ ಲ್ಯಾಪ್ ಟಾಪ್ ಮೂಲಕ ಸಿಡಿಗೆ ವರ್ಗಾಯಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಈ ಎಲ್ಲಾ ಪ್ರಕ್ರಿಯೆಗಳನ್ನು ಹಂತ ಹಂತವಾಗಿ ಛಾಯಾಚಿತ್ರ ತೆಗೆಸಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿನಾಂಕ: 11/04/2018 ರಂದು ಪ್ರಾಂಶುಪಾಲರು, ಪಿವಿಪಿ ಪಾಲಿಟೆಕ್ನಿಕ್, ಡಾ: ಅಂಬೇಡ್ಕರ್ ಇಂಜಿನೀರಿಂಗ್ ಕಾಲೇಜು ಆವರಣ, ಮಲ್ಲತ್ತಹಳ್ಳಿ, ಬೆಂಗಳೂರು-56, ಈ ಕಚೇರಿಯಲ್ಲಿ ಮಧ್ಯಾಹ್ನ 02-25 ಗಂಟೆಯಿಂದ ಸಂಜೆ 05-30 ಗಂಟೆಯವರೆಗೆ ಮಹಜರ್ ಕ್ರಮವನ್ನು ಜರುಗಿಸಿ, ಟ್ರಾಪ್ ಕಾಲಕ್ಕೆ ತಂದಿದ್ದ ಲ್ಯಾಪ್ ಟಾಪ್‌ನಲ್ಲಿ ಉಕ್ತಲೇಖನ ನೀಡಿ ಗಣಕೀಕರಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಲಂಚದ ಹಣವನ್ನು ಜಫ್ತು ಮಾಡಿಕೊಂಡು ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತಾರೆ ಹಾಗೂ ಎದುರುದಾರರನ್ನು ಅದೇ ಕಾರಣಕ್ಕಾಗಿ ದಸ್ತಗಿರಿ ಮಾಡಿರುತ್ತಾರೆ.

viii. ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಆಗುತ್ತದೆ ಎಂಬುದು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಿಂದ ಕಂಡುಬರುತ್ತದೆ. ಎದುರುದಾರರ ಎರಡೂ ಕೈಬೆರಳುಗಳನ್ನು ತೊಳೆಯಿಸಿದ ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಹಾಗೂ ಎದುರುದಾರರ ಪ್ಯಾಂಟಿನ ಎಡಭಾಗದ ಜೇಬಿನಲ್ಲಿ ಫಿನಾಪ್ತಲೀನ್ ಅಂಶವು ಪತ್ತೆಯಾಗಿರುವುದು ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಿಂದ ಧೃಢಪಟ್ಟಿರುತ್ತದೆ. ತನಿಖಾಧಿಕಾರಿಗಳು ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರ ಹೊಂದಿದ ಪ್ರಾಧಿಕಾರದಿಂದ ಎದುರುದಾರರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

ix. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

x. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಇವುಗಳನ್ನು ಪರಿಶೀಲಿಸಿದಾಗ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 (1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

xi. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ.

**2)** ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ದಿನಾಂಕ: 24/11/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ದೂರುದಾರರು ದುರುದ್ದೇಶದಿಂದ ದ್ವೇಷ ಸಾಧಿಸಲು ಬೇರೆ ಯಾರೋ ಮಾತನ್ನು ಕೇಳಿ ದಿ:10/04/2018ರಂದು ಎಸಿಬಿರವರಿಗೆ ದೂರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ದೂರುದಾರರು ಆರ್‌ಟಿಐ ಅಡಿಯಲ್ಲಿ ಕೋರಿದ ದಾಖಲೆಯನ್ನು ತಂದುಕೊಡುತ್ತೇನೆ, ಅದಕ್ಕೆ 25,000/- ರೂ.ಗಳನ್ನು ಕೊಡಬೇಕೆಂದು ಕೇಳಿ ಪಡೆದುಕೊಂಡಿರುತ್ತಾರೆಂದು ನನ್ನ ಮೇಲೆ ವಿನಾ ಕಾರಣ ಹಾಗೂ ಬೇರೆ ಯಾರದೋ ಮಾತನ್ನು ಕೇಳಿ ನನ್ನನ್ನು ತೊಂದರೆಯಲ್ಲಿ ಸಿಕ್ಕಿ ಹಾಕಿಸುವ ದುರುದ್ದೇಶದಿಂದ ಆಪಾದಿಸಿರುವುದು ನನ್ನ ವೃತ್ತಿ ಜೀವನದಲ್ಲಿ ಅತಿಕ್ರಮಣ ಮಾಡಿದಂತಾಗುತ್ತದೆ. ದೂರುದಾರರು ಪ್ರಾಚಾರ್ಯರಿಗೆ ಆರ್‌ಟಿಐ ಅಡಿ ಯಾವ ದಾಖಲೆ ಕೋರಿರುತ್ತಾರೆ, ಯಾವ ದಿನಾಂಕದಂದು ಅವರಿಗೆ ಪತ್ರ ಬರೆದಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲದ ವಿಷಯವಾಗಿರುತ್ತದೆ. ದೂರುದಾರರಿಗೆ ಸಂಬಂಧಿಸಿದ ಕಡತಗಳ ನಿರ್ವಹಣೆ, ಪತ್ರವ್ಯವಹಾರಗಳ ನಿರ್ವಹಣೆ ನೋಡಿಕೊಳ್ಳುವ ವಿಷಯ ನಿರ್ವಾಹಕರು ಶ್ರೀಮತಿ ಮಂಗಳಮ್ಮ, ದ್ವಿ.ದ.ಸ. ಇವರಾಗಿದ್ದು, ನಾನಾಗಿರುವುದಿಲ್ಲ, ಮಂಗಳಮ್ಮ ಇವರ ಬಳಿ ಇರುವ ಕಡತದಲ್ಲಿರುವ ದಾಖಲೆಗಳನ್ನು ದೂರುದಾರರಿಗೆ ಕೊಡಲು ಹೇಗೆ ಸಾಧ್ಯವಿದೆ ಹಾಗೂ 25,000/- ರೂ.ಗಳನ್ನು ಕೊಡುವಂತೆ ಕೇಳಲು ಹೇಗೆ ಸಾಧ್ಯವಿದೆ. ಹಣ ಕೇಳುವುದಾಗಲೀ ಅಥವಾ ಹಣಕ್ಕೆ ಬೇಡಿಕೆ ಇಡುವ ಸಂದರ್ಭವೇ ಒದಗಿ ಬರುವುದಿಲ್ಲ ಹಾಗೂ ಬೇಡಿಕೆ ಇಟ್ಟು ಹಣ ಪಡೆದಿರುವುದಿಲ್ಲ. ದೂರುದಾರರು ದಿನಾಂಕ:06/04/2018ರಂದು ತಮ್ಮ ಮೊಬೈಲ್‌ನಿಂದ ಮಾತನಾಡಿರುತ್ತಾರೆ. ಆದರೆ, ಕೆಲಸಕ್ಕೆ ಸೇರಿಸುವ ವಿಷಯಕ್ಕೆ ಕುರಿತಂತೆ 3-ಲಕ್ಷ ರೂ.ಗಳನ್ನು ನೀಡಿದಲ್ಲಿ ನಾನು ಸಹಾಯ ಮಾಡುವುದಾಗಿ ದೂರುದಾರರು ಆರೋಪಿಸಿರುವ ಅಂಶ ಸತ್ಯಕ್ಕೆ ದೂರವಾಗಿರುತ್ತದೆ. ನಾನು

ದೂರುದಾರರಿಗೆ ಸಂಬಂಧಿಸಿದ ವಿಷಯ ನಿರ್ವಾಹಕನಾಗದೇ ಇರುವುದರಿಂದ ಸದರಿಯವರ ಗೈರು ಹಾಜರಾದ ಬಗ್ಗೆಯಾಗಲೀ, ಕೆಲಸಕ್ಕೆ ಬಾರದಿರುವ ವಿಷಯವಾಗಲೀ, ನನಗೆ ಗೊತ್ತಿರುವುದಿಲ್ಲ. ಆದ್ದರಿಂದ 3–ಲಕ್ಷಕ್ಕೆ ಬೇಡಿಕೆ ಇಟ್ಟಿರುವುದಿಲ್ಲ. ಹಣಕ್ಕೆ ಬೇಡಿಕೆ ಇಡದಿದ್ದರೂ ಸಹಾ ಮಾನ್ಯ ಎಸಿಬಿರವರು ತಮ್ಮ ಬಲೆಗೆ ಬೀಳಿಸಿಕೊಳ್ಳಲು ಪಂಚಸಾಕ್ಷಿ–2ಆದ ಲೋಕೇಶ್ ನಾಯ್ಕರವರನ್ನು ಬಳಸಿಕೊಂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಆದ್ದರಿಂದ ಎಸಿಬಿರವರ, ದೂರುದಾರನ ಪೂರ್ವ ನಿಯೋಜಿತ ಕೃತ್ಯವೆಂದು ಇದರಿಂದ ಕಂಡುಬರುತ್ತದೆ. ದಿನಾಂಕ:11/04/2018ರಂದು ದೂರುದಾರರಿಗೆ ಹಣದ ಬೇಡಿಕೆ ಇಟ್ಟಿಲ್ಲ, ನಾನು ದೂರುದಾರನಿಗೆ ಹಣದ ಬೇಡಿಕೆ ಇಡದಿದ್ದರೂ ಹಣವನ್ನು ಒತ್ತಾಯ ಪೂರ್ವಕವಾಗಿ ನನಗೆ ಕೊಟ್ಟಿರುತ್ತಾರೆ. ವಾಯ್ಸ್ ರೆಕಾರ್ಡ್‌ನಲ್ಲಿ ನಾನು ಹಣಕ್ಕೆ ಬೇಡಿಕೆ ಇಟ್ಟ ಬಗ್ಗೆ ಯಾವ ವಿವರ ದಾಖಲಾಗಿಲ್ಲ. ವಿಷಯ ನಿರ್ವಾಹಕರು ಬೇರೆ ಇರುವಾಗ ದೂರುದಾರನ ಕೆಲಸದ ಬಗ್ಗೆ ವಿಳಂಬ ಮಾಡುವ ಪ್ರಸಂಗವಾಗಲೀ ಅಥವಾ ಹಣಕ್ಕೆ ಬೇಡಿಕೆ ಇಡುವ ಸಂದರ್ಭವೇ ಒದಗಿ ಬರುವುದಿಲ್ಲವಾದ್ದರಿಂದ ದಿನಾಂಕ:11/04/2018ರಂದು ನಾನು ದೂರುದಾರನಿಗೆ ಹಣ ಕೊಡಲೇ ಬೇಕೆಂದು ಒತ್ತಾಯಿಸಿರುವುದಿಲ್ಲ. ಟ್ರ್ಯಾಪ್ ಸಮಯದಲ್ಲಿ ಎಸಿಬಿ ಅಧಿಕಾರಿಗಳ ಒತ್ತಡದಿಂದ ಭಯಭೀತನಾಗಿ ದೂರುದಾರನಿಂದ ಹಣ ಪಡೆದಿರುವುದು ಸರಿ ಎಂದು ಬರೆದುಕೊಟ್ಟಿರುತ್ತೇನೆ. ಎಸಿಬಿರವರು ತಜ್ಞರ ಪರೀಕ್ಷಾ ವರದಿಗಳನ್ನು ನನಗೆ ಪರಿಶೀಲನೆಗೆ ಒದಗಿಸಿರುವುದಿಲ್ಲ ಹಾಗೂ ಅಭಿಯೋಜನೆಗೆ ಒಳಪಡಿಸಲು ಅನುಮತಿಯನ್ನು ನೀಡುವ ಪೂರ್ವದಲ್ಲಿ ನೇಮಕ ಪ್ರಾಧಿಕಾರವು ಎಸಿಬಿಯವರು ಸಲ್ಲಿಸಿರುವ ದಾಖಲೆಗಳನ್ನು ನನಗೆ ಒದಗಿಸಿಲ್ಲ ಮತ್ತು ರಕ್ಷಣಾ ಹೇಳಿಕೆ ನೀಡಲು ನನಗೆ ಅವಕಾಶ ನೀಡಿರುವುದಿಲ್ಲ. ದೂರಿನಲ್ಲಿಯ ಅಂಶಗಳು ವಾಸ್ತವಕ್ಕೆ ಮತ್ತು ಸತ್ಯಕ್ಕೆ ದೂರವಾಗಿವೆ. ನಾನು ಪ್ರಾಮಾಣಿಕವಾಗಿ ಸರಿಯಾಗಿ ಕೆಲಸ ನಿರ್ವಹಿಸಿದ್ದು, ನಡತೆ ನಿಯಮಗಳಿಗೆ ವ್ಯತಿರಿಕ್ತವಾಗಿ ನಡೆದುಕೊಂಡಿರುವುದಿಲ್ಲ. ಕಾರಣ ಈ ಪ್ರಕರಣವನ್ನು ಈ ಹಂತದಲ್ಲಿಯೇ ಕೈಬಿಟ್ಟು ಪ್ರತಿರಕ್ಷಣಾ ಹೇಳಿಕೆಯನ್ನು ಪರಿಗಣಿಸಿ ನ್ಯಾಯ ಒದಗಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ" ಎಂದು ಮುಂತಾಗಿ ಸಮಜಾಯಿಷಿ ನೀಡಿರುತ್ತಾರೆ.

3) ಎದುರುದಾರರು ಸಲ್ಲಿಸಿರುವ ಸಮಜಾಯಿಷಿಯನ್ನು ತನಿಖಾ ಕಾಲದಲ್ಲಿ ಸಂಗ್ರಹಿಸಲಾದ, ದಾಖಲಾತಿಗಳು ಮತ್ತು ಹೇಳಿಕೆಗಳೊಂದಿಗೆ ಪರಿಶೀಲಿಸಲಾಗಿದ್ದು, ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುವುದು ಕಂಡುಬರುತ್ತದೆ. ಎದುರುದಾರರು ನೀಡಿರುವ ಉತ್ತರದಲ್ಲಿ ಅವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

4) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಫಿರ್ಯಾದುದಾರರಿಂದ ಲಂಚದ ಹಣವನ್ನು ಪಡೆದುಕೊಂಡಿದ್ದು, ತನ್ಮೂಲಕ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

5) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವರ್ತನೆ/ದುರ್ನಡತೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ

ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

6) ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

21/4/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
**ಉಪಲೋಕಾಯುಕ್ತರು-1**
**ಕರ್ನಾಟಕ ರಾಜ್ಯ, ಬೆಂಗಳೂರು.**